**ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಇಂದು ದಿನಾಂಕಃ 08.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ನಾನು ಈ ದಿನ ನ್ಯಾಯಾಲಯಕ್ಕೆ ಪ್ರತಿವಾದಿಯ ಬ್ಯಾಂಕ ಖಾತೆಯ ಸ್ಟೇಟಮೆಂಟನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಡಿ.4 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ವಾದಿ ಪರ ವಕೀಲರಿಂದಃ-**

ನಿಡಿ.4 ರಂತೆ ಹಾಜರುಪಡಿಸಿರುವ ಬ್ಯಾಂಕ ಸ್ಟೇಟಮೆಂಟ ಪ್ರತಿವಾದಿಯ ಹೆಸರಿಗೆ ಇರುತ್ತದೆ. ಪ್ರತಿವಾದಿಯು ವಾದಿಗೆ ಸಾಲವನ್ನು ಕೊಟ್ಟಿರುತ್ತಾನೆಂದು ತೋರಿಸಲು ನಿಡಿ4 ನ್ನು ಹಾಜರುಪಡಿಸಿರುತ್ತೇನೆ. ನನ್ನ ಬ್ಯಾಂಕ ಖಾತೆಯಿಂದ ಹಣವನ್ನು ವಿತ್ಡ್ರಾ ಮಾಡಿಕೊಂಡು 04 ಲಕ್ಷ ನಗದು ಹಣವನ್ನು ವಾದಿಗೆ ಕೊಟ್ಟಿರುತ್ತೇವೆ. ಸದರಿ ಹಣ ಕೊಟ್ಟಿರುವ ಬಗ್ಗೆ ವಾದಿಯಿಂದ ರಸೀದಿ ಪಡೆದುಕೊಂಡಿರುವುದಿಲ್ಲ. ಸನ್ 2019 ರ ನವೆಂಬರ್ ತಿಂಗಳಿನಲ್ಲಿ ಸದರಿ ಹಣವನ್ನು ವಾದಿಗೆ ಕೊಟ್ಟಿರುತ್ತೇವೆ. ಸದರಿ ಸಮಯದಲ್ಲಿ ಬ್ಯಾಂಕನಿಂದ ನಾವು ಸುಮಾರು 10 ಲಕ್ಷ ರೂ. ಹಣವನ್ನು ವಿತ್ಡ್ರಾ ಮಾಡಿರುತ್ತೇವೆ. ಸದರಿ ಸಮಯದಲ್ಲಿ ನಾವು ಬ್ಯಾಂಕನಿಂದ ವಿತ್‌ಡ್ರಾ ಮಾಡಿಕೊಂಡ ಹಣವನ್ನು ನಮ್ಮ ಮನೆತನದ ಅಡಚಣೆಗೆ ಬಳಸಿಕೊಂಡಿದ್ದು, ವಾದಿಗೆ ಯಾವುದೇ ರೀತಿಯಾದ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ದಾವಾ ಆಸ್ತಿಯನ್ನು ವಾದಿಗೆ ಖರೀದಿ ಕೊಡಬಾರದೆಂದು ಬ್ಯಾಂಕನಿಂದ ಹಣವನ್ನು ಪಡೆದು ನಗದು ಹಣವನ್ನು ವಾದಿಗೆ ಕೊಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ರೂ. 04 ಲಕ್ಷ ಗಳನ್ನು ವಾದಿಗೆ ಬ್ಯಾಂಕ ಖಾತೆಯ ಮೂಲಕ ಕೊಡಲು ಏನಾದರೂ ತೊಂದರೆ ಇತ್ತಾ? ಎಂದರೆ ಸಾಕ್ಷಿಯು ಯಾವುದೇ ತೊಂದರೆ

ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ವಾದಿಗೆ ನಾವು ಯಾವುದೇ ರೀತಿಯ ಹಣವನ್ನು ಕೊಟ್ಟಿರದೇ ಇದ್ದರೂ ಸಹ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಡಿ.4 ರಂತೆ ಹಾಜರುಪಡಿಸಿರುವ ದಾಖಲೆಗಳೂ ಹಾಗೂ ಸದರಿ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಸೇರಿಕೊಂಡು ಹೇಗಾದರೂ ಮಾಡಿ ದಾವಾ ಆಸ್ತಿಯನ್ನು ಖರೀದಿ ಕೊಡಬಾರದೆಂಬ ದುರುದ್ದೇಶದಿಂದ ಹಾಗೂ ಅವಳ ಹಣವನ್ನು ಎತ್ತಿ ಹಾಕುವ ದುರಾಸೆಯಿಂದ ಖೊಟ್ಟಿ ದಾಖಲೆಯನ್ನು ಹಾಜರುಪಡಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ